ii) ವಿಷಯ: ರಾಗಿ ಬೆಳೆಗೆ ಬೆಂಬಲ ಬೆಲೆ ಘೋಷಿಸುವ ಬಗ್ಗೆ

– 0 –

ಶ್ರೀ ವೈ.ಎಸ್.ವಿ.ದತ್ತಾ: ಮಾನ್ಯ ಅಧ್ಯಕ್ಷರೆ, ರಾಗಿ ಜನಾನುರಾಗಿ ಒಂದು ಗಾದೆ ಇದೆ, ಅಷ್ಟೇ ಅಲ್ಲ, 96 ಕ್ವಿಂಟಾಲ್ ರಾಗಿ ಮುದ್ದೆಗೆ ರಾಷ್ಟ್ರೀಯ ಮಹತ್ವ, ರಾಷ್ಟ್ರೀಯ ಪ್ರಸಿದ್ಧಿಯೂ ಕೂಡ ಬಂದಿದೆ.

ಅಧ್ಯಕ್ಷರು: ಹೌದು, ಹೌದು.

ಶ್ರೀ ವೈ.ಎಸ್.ವಿ.ದತ್ತಾ: ಆದರೆ ರಾಗಿ ಬೆಳೆಯುವವರ ಸ್ಥಿತಿ ಮಾತ್ರ ಬಹಳ ಕಷ್ಟವಾಗಿದೆ. ಇವತ್ತು ಕಬ್ಬು, ದ್ರಾಕ್ಷಿ ಬೆಳೆಗಾರರ ಬಗ್ಗೆ ಚರ್ಚೆ ಮಾಡಿದರೆ, ರಾಗಿ ಬೆಳೆಯುವವರೆಲ್ಲಾ ರೈತರಲ್ಲಿ BPL cardholders ಇದ್ದಂತೆ ಇದ್ದೇವೆ. ಆ ಕಾರಣಕ್ಕೆ ರಾಗಿ ಬೆಳೆಯುವ ನಮ್ಮಂಥ ಪ್ರದೇಶದಲ್ಲಿ, ಪರಿಸ್ಥಿತಿ ಹೇಗಾಗಿದೆ ಎಂದರೆ 8 ತಿಂಗಳ ಕೆಳಗೆ ನಿಮ್ಮ ಸರ್ಕಾರ, ನಮ್ಮ ಸರ್ಕಾರ ಎಲ್ಲರ ಸರ್ಕಾರ ₹ 1850 ಕೊಟ್ಟು ಸರ್ಕಾರವೇ ರಾಗಿ ಖರೀದಿ ಮಾಡುವ ವ್ಯವಸ್ಥೆಯನ್ನು ಮಾಡಿತ್ತು, ಈಗ ಅದನ್ನು ನಿಲ್ಲಿಸಿಬಿಟ್ಟಿದ್ದೀರಿ. ನಿಲ್ಲಿಸಿರುವುದರಿಂದ ಪರಿಸ್ಥಿತಿ ಏನಾಗಿದೆ ಎಂದರೆ, ರಾಗಿ ಬೆಲೆ ₹ 850 ಕ್ಕೆ ಇಳಿದಿದೆ. ಈ ಪರಿಸ್ಥಿತಿಯ ದುರ್ಲಾಭ ಮಾಡಿಕೊಂಡು ಮಧ್ಯವರ್ತಿಗಳು ನೇರವಾಗಿ ರೈತರ ಕಣಕ್ಕೆ ಹೋಗಿ ₹ 600, ₹ 800 ಈಗಲೇ ಖರೀದಿ ಮಾಡುವುದಕ್ಕೆ ಹೊರಟಿದ್ದಾರೆ, ರೈತರು ಆತಂಕದಲ್ಲಿ ಸಿಕ್ಕ ಸಿಕ್ಕ ಬೆಲೆಯಲ್ಲಿ ಮಾರಿಕೊಳ್ಳುತ್ತಿದ್ದಾರೆ. ನಾಳೆ ಫಜೀತಿಯಾಗುತ್ತದೆ, ರಾಗಿ ಪಿಡಿಎಸ್‌ನಲ್ಲೂ ಇದೆ. ಆ ಕಾರಣಕ್ಕೆ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಂಡು ಒತ್ತಾಯ ಮಾಡುವುದೇನೆಂದರೆ, ದಯವಿಟ್ಟು ರಾಗಿಗೆ ತಕ್ಷಣವೇ ಬೆಂಬಲ ಬೆಲೆಯನ್ನು ಘೋಷಣೆ ಮಾಡುತ್ತೀರೋ, ನೀವೇ ನೇರವಾಗಿ ಖರೀದಿ ಮಾಡುತ್ತೀರೋ? ಈಗ ಮಧ್ಯವರ್ತಿಗಳಿಂದ ಅವರನ್ನು ತಪ್ಪಿಸಿ ರೈತರಿಂದ ನೇರವಾಗಿ ಖರೀದಿ ಮಾಡಿ procure ಮಾಡಿಕೊಂಡು ಪಿಡಿಎಸ್ ಮೂಲಕ ಹಂಚುವ ವ್ಯವಸ್ಥೆಯನ್ನು ಮಾಡಿದರೆ, ರೈತರೂ ಉಳಿಯುತ್ತಾರೆ, ರಾಗಿ ತಿನ್ನುವ ಜನರೂ ಉಳಿಯುತ್ತಾರೆ.

ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಈ ವಿಚಾರವಾಗಿ, ಕಳೆದ ವರ್ಷ ರಾಗಿಗೆ ನಾವು ಬೆಂಬಲ ಬೆಲೆಯನ್ನು ಕೊಟ್ಟಿದ್ದೆವು, ಅದನ್ನು procurement ಮಾಡುವುದಕ್ಕೆ ಹೋದ ಸಂದರ್ಭದಲ್ಲಿ ಬಂದಿದ್ದು ಕೆಲವೇ ಕ್ವಿಂಟಾಲ್, ಉತ್ಪಾದನೆ ಇಲ್ಲದಿರುವ ಕಾರಣ ಯಾರೂ ಕೊಡುವುದಕ್ಕೆ ಮುಂದೆ ಬರಲಿಲ್ಲ. ಈ ಸಾರಿಯೂ ಮುಂದುವರೆಸಬೇಕೆನ್ನುವ ಚಿಂತನೆ ಇದೆ, ಅಂತಿಮವಾಗಿ ನಿರ್ಧಾರ ಮಾಡುವುದಕ್ಕೆ, ಇದಕ್ಕೆ ಸಂಬಂಧಿಸಿದಂತೆ ಒಂದು ಸಂಪುಟದ ಉಪ ಸಮಿತಿ ಇದೆ, ಅದಕ್ಕೆ ನಾನೇ ಅಧ್ಯಕ್ಷನಾಗಿದ್ದೇನೆ, ನಾಳೆ ಸಭೆಯನ್ನು ಕರೆದಿದ್ದೇನೆ, ಅದರಲ್ಲಿ ಅಂತಿಮವಾದ ನಿರ್ಧಾರವನ್ನು ಮಾಡುತ್ತೇವೆ. ಆದರೆ ನಮ್ಮ ಕಳಕಳಿಯೂ ಕೂಡ ರಾಗಿ ಮತ್ತು ಜೋಳವನ್ನು ಪಿಡಿಎಸ್ ನಲ್ಲಿ ಕೊಡಬೇಕೆನ್ನುವುದಿದೆ, in the interest of the balance diet ದೃಷ್ಟಿಯಿಂದಲೂ ಕೂಡ ಇದೆ, ಇದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ವೈ.ಎಸ್.ವಿ.ದತ್ತಾ: ಮೊನ್ನೆ ನಿಮ್ಮ ಕೃಷಿ ಇಲಾಖೆಯ ಜಂಟಿ ನಿರ್ದೇಶಕರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ, ಕೆಲವು ಜಿಲ್ಲೆಗಳಿಗೆ ರಾಗಿ ಬೆಳೆಯುವ ರೈತರಿಗೆ incentive ಕೊಡುವ ದೃಷ್ಟಿಯಿಂದ ಕೆಲವು ಘಟಕಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಅದರಲ್ಲಿ ಹಾಸನ ಜಿಲ್ಲೆಗೆ 10 ಘಟಕ, ಚಿತ್ರದುರ್ಗ–ದಾವಣಗೆರೆ ಜಿಲ್ಲೆಗಳಿಗೆ 20–25 ಘಟಕ ಎಂದು ಮಾಡಿದ್ದಾರೆ. ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಡೂರು, ತರೀಕೆರೆ ತಾಲ್ಲೂಕು part of Chikkamagaluru ರಾಗಿ ಬೆಳೆಯುವ ಪ್ರದೇಶಗಳು, ನಮಗೆ ಕೇವಲ ಐದೇ ಐದು ಘಟಕವನ್ನು ಕೊಟ್ಟಿದ್ದಾರೆ, ನಮ್ಮಲ್ಲಿ ರಾಗಿ ಬೆಳೆಯುವ ರೈತರೆ, ಜಾಸ್ತಿ ಇರುವುದರಿಂದ ಆ ಘಟಕಗಳ ಸಂಖ್ಯೆಯನ್ನು ಚಿಕ್ಕಮಗಳೂರು ಜಿಲ್ಲೆಗೆ ಜಾಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು: ಸುನೀಲ್ ಕುಮಾರ್‌ರವರೆ, ಪಶ್ಚಿಮ ಘಟ್ಟಗಳಲ್ಲಿ ಕಸ್ತೂರಿ ರಂಗನ್ ವರದಿಯ ಜಾರಿಯ ವಿಚಾರ ದೊಡ್ಡ ಸಮಸ್ಯೆಯಾದ್ದರಿಂದ ಮತ್ತೆ ಎರಡು ಸಾರಿ ಏಕೆ ಚರ್ಚೆಗೆ ಹಾಕಿಕೊಳ್ಳೋಣ.

ಶ್ರೀ ವಿ.ಸುನೀಲ್ ಕುಮಾರ್: ಮಾತನಾಡಲು ಮೊದಲು ನನಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಖಂಡಿತಾ ಕೊಡುತ್ತೇನೆ.

iii) ವಿಷಯ: ಗ್ರಾಮ ಪಂಚಾಯತ್ ಆಸ್ತಿಯಾಗಿರುವ ಕಾನಕೂರು ಬಸ್ ನಿಲ್ದಾಣದಲ್ಲಿರುವ ಕ್ಯಾಂಟೀನ್ ತೆರವುಗೊಳಿಸುವ ಬಗ್ಗೆ.

– 0 –

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ತಾರೇಹಳ್ಳಿ ಕಾನಸೂರು ಎನ್ನುವ ಒಂದು ಗ್ರಾಮಪಂಚಾಯತಿಯಲ್ಲಿ 2002–2004ರವರೆಗೆ ಬಾಡಿಗೆ ಆಧಾರದ ಮೇಲೆ ಬಸ್ ನಿಲ್ದಾಣ ಕ್ಯಾಂಟೀನ್ ಅನ್ನು ನಡೆಸುವುದಕ್ಕೆ ಕೊಟ್ಟಿದ್ದೇವೆ. 2004ರ ನಂತರ ಅವರು ತಮ್ಮಲ್ಲೇ ಕಬ್ಜಾ ಇಟ್ಟುಕೊಂಡು, ಇದುವರೆವಿಗೂ ಪಂಚಾಯತಿಗೆ ಬಾಡಿಗೆ ಕೊಡದೆ, ಪಂಚಾಯತಿ ಕೋರ್ಟಿಗೆಲ್ಲಾ ಹೋಯಿತು, ಕೋರ್ಟಿನಲ್ಲಿ ಅನೇಕ ರೀತಿಯ ಆದೇಶಗಳಾಗಿ ಪಂಚಾಯತಿಗೆ ಆಸ್ತಿ ಬಿಟ್ಟುಕೊಡಬೇಕೆಂದಾಯಿತು, ಈಗ ತಕ್ಷಣ ಅದನ್ನು ಖಿಲ್ಲಾಗೊಳಿಸಬೇಕು. Assistant Commissioner ರವರೂ ಆದೇಶ ಮಾಡಿದ್ದಾರೆ, ಅಲ್ಲಿ ಎಲ್ಲಾ ಆದೇಶವಾಗಿದೆ, ಆದರೂ ಕಬ್ಜಾ ತೆಗೆದುಕೊಳ್ಳುತ್ತಿಲ್ಲ. ಕಾರ್ಯದರ್ಶಿ, ಅಧ್ಯಕ್ಷರು ಹೋರಾಟ ಮಾಡಿ ಸರ್ಕಾರದ ಆಸ್ತಿ ಉಳಿಸಿಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ, ಸರ್ಕಾರ ಅದಕ್ಕೆ ಪ್ರೋತ್ಸಾಹ ಕೊಡದಿದ್ದರೆ ಹೇಗೆ? ಕೋರ್ಟು ಕಚೇರಿಯಲ್ಲಿ ಹೋರಾಟ ಮಾಡಿದ್ದಾರೆ. ಅವರ ಹತ್ತಿರ ಇನ್ನೂ ಮೂರೂವರೆ ಲಕ್ಷ ರೂಪಾಯಿಗಳ ಬಾಕಿ ಇದೆ, ಅದನ್ನು ತೆಗೆದುಕೊಳ್ಳಬೇಕು, ಖಿಲ್ಲಾಗೊಳಿಸಬೇಕು. ಬಾಡಿಗೆನೂ ಕೊಡುತ್ತಿಲ್ಲ, ಖಿಲ್ಲಾಗೊಳಿಸುತ್ತಿಲ್ಲ, ಕೋರ್ಟ್ ಆದೇಶವಿದೆ, ಎಸಿ ಆದೇಶ ಮಡಿದ್ದಾರೆ, ನಿಮ್ಮ ಅಧಿಕಾರಿಗಳಿಗೆ ಇಚ್ಛಾಶಕ್ತಿಯ ಕೊರತೆ ಇದೆ, ತಕ್ಷಣ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿ, ಅವರನ್ನು ಅಲ್ಲಿಂದ ಖಿಲ್ಲಾ